**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-2**
**ಸಿಡಬ್ಲ್ಯೂ- *5***

| | |
|---|---|
| ಹೆಸರು | - ಕಲ್ಲಪ್ಪ ಪಾರೇಶ ಸವದತ್ತಿ |
| ವಯಸ್ಸು | - 52 ವರ್ಷ |
| ಉದ್ಯೋಗ | - ಎ.ಎಸ್.ಐ ಜಮಖಂಡಿ ಗ್ರಾಮೀಣ ಠಾಣೆ |
| ವಾಸಸ್ಥಳ | - ಜಮಖಂಡಿ |

====

**ಸಾಕ್ಷಿಗೆ ಇಂದು ದಿನಾಂಕ 29.12.2023 ರಂದು ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ: ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

ನಾನು 2016 ರಿಂದ 2022 ರ ವರೆಗೆ ಜಮಖಂಡಿ ನಗರ ಠಾಣೆಯಲ್ಲಿ ಸಿ.ಎಚ್.ಸಿ759 ಆಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕ 04.11.2019 ರಂದು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ಚಾ.ಸಾ.1 ರವರ ಕರೆಸಿ, ಹಿರೇಪಡಸಲಗಿ ಗ್ರಾಮದ ಮಂಜುನಾಥ ಧರೆಪ್ಪ ಗುಗ್ಗರಿ ಎಂಬುವರ ತೋಟದ ಮನೆಯಲ್ಲಿ ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟಿದ್ದ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ನಡೆಸಲು ಹೋಗಬೇಕೆಂದು ಸೂಚಿಸಿದ್ದು ಅದರಂತೆ ಚಾ.ಸಾ.1, ಸಹಸಿಬ್ಬಂದಿಯವರಾದ ಚಾ.ಸಾ.6 ರಿಂದ 10 ರವರೊಂದಿಗೆ ಮತ್ತು ಪಂಚರಾದ ಚಾ.ಸಾ.2 ಮತ್ತು 3 ಹಾಗೂ ಪತ್ರಾಂಕಿತ ಅಧಿಕಾರಿಯಾದ ಚಾ.ಸಾ.4 ರವರೊಂದಿಗೆ ಠಾಣೆಯಿಂದ ಬೆಳಿಗ್ಗೆ 9.30 ಕ್ಕೆ ಹೊರಟು, ಬೆಳಿಗ್ಗೆ 10.30 ಕ್ಕೆ ಅಡಿಹುಡಿ ಕ್ರಾಸ್ ಬಳಿ ಬಂದಿದ್ದು, ಅಲ್ಲಿಗೆ ಚಾ.ಸಾ.10 ರವರು ತೂಕಮಾಡುವ ಯಂತ್ರವನ್ನು ತೆಗೆದುಕೊಂಡು ಬಂದಿದ್ದು, ನಂತರ ಒಟ್ಟಿಗೆ ಬೆಳಿಗ್ಗೆ 10.45 ಕ್ಕೆ ಬಾತ್ಮಿ ಜಮೀನು ಬಳಿ ಹೋಗಿ, ನಿಲ್ಲಿಸಿ, ನಡೆದುಕೊಂಡು, ಬಾತ್ಮಿ ಮನೆಯ ಮುಂದೆ ಇರುವ ಶೆಡ್ಡ ಬಳಿ ನಿಂತು ನೋಡಲಾಗಿ, ಒಬ್ಬ ವ್ಯಕ್ತಿ ಗೊಬ್ಬರದ ಚೀಲ ಹಿಡಿದುಕೊಂಡಿದ್ದು, ಇನ್ನೊಬ್ಬ ಅದಕ್ಕೆ ಏನನ್ನೋ ತುಂಬುತ್ತಿದ್ದು ಕಂಡುಬಂದಿದ್ದು, ಇಬ್ಬರೂ ಗಾಂಜಾವನ್ನು ಚೀಲದಲ್ಲಿ

ತುಂಬುತ್ತಿದ್ದಾರೆ ಎಂದು ಖಾತ್ರಿಯಾಗಿ, ಎಲ್ಲರೂ ಸೇರಿ ದಾಳಿಮಾಡಿ, ಅವರಿಬ್ಬರಿಗೆ ಹಿಡಿದು, ಅವರ ಹೆಸರು, ವಿಳಾಸವನ್ನು ಪಡೆದುಕೊಂಡಿರುತ್ತೇವೆ. ಸದರಿ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಇರುತ್ತಾರೆ.

3. ಬಳಿಕ ಅವರಿಗೆ ವಿಚಾರ ಮಾಡಲಾಗಿ ಸದರಿಯವರು ತಮ್ಮ ಜಮೀನಿನ ಕಬ್ಬಿನ ಬೆಳೆಯಲ್ಲಿ ಬೆಳೆದ ಗಾಂಜಾವನ್ನು ಮಾರಾಟ ಮಾಡುವ ಸಲುವಾಗಿ ಒಣಗಿಸಿ, ಚೀಲದಲ್ಲಿ ತುಂಬುತ್ತಿರುವುದಾಗಿ ತಿಳಿಸಿದ್ದು, ಬಳಿಕ ಚಾ.ಸಾ.1 ರವರು ಸ್ಥಳದಲ್ಲೇ ಪಂಚನಾಮೆ ಜರುಗಿಸಿ, ಗಾಂಜಾ ತುಂಬಿದ ಚೀಲವನ್ನು ತೂಕಮಾಡಲಾಗಿ ಒಟ್ಟು 4.9 ಕೆ.ಜಿ ಇದ್ದು, ಅದರಲ್ಲಿ 100 ಗ್ರಾಂ ನಷ್ಟು ಗಾಂಜಾವನ್ನು ಮಾದರಿ ತೆಗೆದು, ಬಿಳಿಬಟ್ಟೆಯಲಿ ಹಾಕಿ, ಪ್ಯಾಕ್ ಮಾಡಿ, ಅದಕ್ಕೆ ಅರಗು ಮತ್ತು ಮೊಹರು ಹಚ್ಚಿ, ವಶಕ್ಕೆ ಪಡೆದುಕೊಂಡಿದ್ದು, ಆರೋಪಿತರು ಗಾಂಜಾವನ್ನು ತಮ್ಮ ಮನೆಯ ಹಿಂದೆ ಇರುವ ಕಬ್ಬಿನ ಗದ್ದೆಯಲ್ಲಿ ಬೆಳೆಯುವುದಾಗಿ ತಿಳಿಸಿದ್ದು, ಅಲ್ಲಿ ಪರಿಶೀಲಿಸಲಾಗಿ ಯಾವುದೇ ಗಾಂಜಾಗಿಡಗಳು ಇರಲಿಲ್ಲ. ಚಾ.ಸಾ.1 ರವರು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರ ವರೆಗೆ ಪಂಚನಾಮೆ ಮತ್ತು ಸ್ಥಳದ ಕಚ್ಚಾನಕಾಶೆ ತಯಾರಿಸಿದ್ದು, ಆಕಾಲಕ್ಕೆ ಈಗ ತೋರಿಸುತ್ತಿರುವ ನಿ.ಪಿ.3 ರಿಂದ 5 ಫೋಟೋಗಳನ್ನು ತೆಗೆಸಿರುತ್ತಾರೆ. ಮಾದರಿಗಾಗಿ ಪ್ರತ್ಯೇಕಗೊಳಿಸಿದ ಗಾಂಜಾವನ್ನು ಈಗಾಗಲೇ ಮು.ಮಾ.1 ಎಂದು ಗುರ್ತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ ಸಿ ಎಚ್ ವಕೀಲರಿಂದ</u>**

4. ಸಿ.ಪಿ.ಐ ರವರ ಕಚೇರಿಯಿಂದ ಬೆಳಿಗ್ಗೆ 9.30 ಕ್ಕೆ ಹೊರಟಿರುತ್ತೇವೆ. ಚಾ.ಸಾ.4 ರವರು ಪ್ರತ್ಯೇಕ ವಾಹನದಲ್ಲಿ ಬಂದಿದ್ದು, ನಾವು ಬೇರೆ ವಾಹನದಲ್ಲಿ ಹೋಗಿರುತ್ತೇವೆ. ಬಾತ್ಮಿ ಸ್ಥಳದ ಸರ್ವೆ ನಂಬರ ನನಗೆ ಗೊತ್ತಿಲ್ಲ. ಅದು ಯಾರ ಹೆಸರಿನಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಬಾತ್ಮಿ ಸ್ಥಳವನ್ನು ಬಾತ್ಮಿದಾರರು ಹೇಳಿರುತ್ತಾರೆ. ಬಾತ್ಮಿ ಸ್ಥಳದಲಿ ಹೊಲದಲ್ಲಿ ಮನೆ ಇದ್ದು, ಅದು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ಥಳದ ಅಕ್ಕಪಕ್ಕದಲ್ಲಿ ಸ್ವಲ್ಪ ದೂರದಲ್ಲಿ ಮನೆಗಳಿವೆ. ವಾಹನಗಳನ್ನು ಮನೆಯ ಸಮೀಪ ನಿಲ್ಲಿಸಿದ್ದೆವು. ಬಾತ್ಮಿ ಮನೆಯ ಬಳಿ ಯಾವುದೇ ದನದ ಕೊಟ್ಟಿಗೆ ಇರಲಿಲ್ಲ ಅಂದರೆ ಸರಿಯಲ್ಲ. ಬಾತ್ಮಿ ಬಂದ ಮನೆಯ ಒಳಗಡೆ

**ಪಿಡಬ್ಲ್ಯೂ-2**
**ಸಿಡಬ್ಲ್ಯೂ- *5***

ಎಷ್ಟು ಜನ ಇದ್ದರು ಎಂಬುದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಮಧ್ಯಾಹ್ನ 12.45 ರ ವರೆಗೆ ಇದ್ದೆವು. ಪಂಚನಾಮೆಯನ್ನು ಲ್ಯಾಪಟಾಪಿನಲ್ಲಿ ಚಾ.ಸಾ.7 ರವರು ಅಚ್ಚುಮಾಡಿರುತ್ತಾರೆ. ಪಂಚನಾಮೆಯನ್ನು ಠಾಣೆಯಲ್ಲಿ ಪ್ರಿಂಟ್ ತೆಗೆದಿರುತ್ತೇವೆ. ನಾನು ಪಂಚನಾಮೆಗೆ ಸಹಿ ಮಾಡಿಲ್ಲ, ಹೇಳಿಕೆ ಕೊಟ್ಟಿರುತ್ತೇನೆ.

5. ಗೊಬ್ಬರದ ಚೀಲಕ್ಕೆ ಮತ್ತು ಮು.ಮಾ.1 ಕ್ಕೆ ಏನೆಂದು ಮೊಹರು ಹಾಕಿರುತ್ತಾರೆ ಎಂದು ಗೊತ್ತಿಲ್ಲ. ಬಾತ್ಮಿ ಸ್ಥಳಕ್ಕೆ ತೆರಳಿ ನೋಡಲಾಗಿ , ಆರೋಪಿತರು ತಮ್ಮ ಮನೆಯ ಮುಂದೆ ಗೊಬ್ಬರದ ಚೀಲಕ್ಕೆ ಗಾಂಜಾ ತುಂಬುತ್ತಿರುವುದು ಕಂಡುಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗೊಬ್ಬರದ ಚೀಲವನ್ನು ತೂಕಮಾಡಿ ಪಂಚನಾಮೆ ಜರುಗಿಸಿ, ಮು.ಮಾ.1 ಮಾದರಿ ತೆಗೆದಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚೀಲದಲ್ಲಿ ಒಣಗಿದ ಗಾಂಜಾ ಎಲೆಗಳು ಇದ್ದವು. ಮು.ಮಾ.1 ರಲ್ಲಿ ಗಾಂಜಾ ಎಲೆಗಳು ಇದ್ದವು. ಗಾಂಜಾಗಿಡಗಳನ್ನು ಬೆಳೆದಿದ್ದ ಜಮೀನಿನ ಸರ್ವೇ ನಂಬರ ಹೇಳಲಾಗುವುದಿಲ್ಲ. ಯಾವುದೇ ದಾಳಿಯಲ್ಲಿ ಪಾಲ್ಗೊಂಡಿರುವುದಿಲ್ಲ, ಅಂಕಿ-ಅಂಶದ ಸಲುವಾಗಿ ಮೇಲಾಧಿಕಾರಿಗಳು ಸುಳ್ಳು ಪ್ರಕರಣ ಮಾಡಿದ್ದು, ಅದಕ್ಕೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ಕ್ಕೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ- ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.